2005–06	126	756	126
2006–07	485	2910	485
2007–08	609	3654	609
ಒಟ್ಟು	1220	7320	1220

ಇ) ಶಿಕ್ಷಕರು ಇಲ್ಲದೇ ಹೋದಲ್ಲಿ ಗ್ರಾಮಾಂತರ ಪ್ರದೇಶದ ಮಕ್ಕಳು ತಮ್ಮ ಎಲ್.ಸಿ.ತೆಗೆದುಕೊಂಡು ಹೋಗುತ್ತಿರುವುದನ್ನು ಯಾವಾಗ ಸರಿಪಡಿಸಲಾಗುವುದು?

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರು ಇಲ್ಲವೆಂದು ಗ್ರಾಮಾಂತರ ಪ್ರದೇಶದ ಮಕ್ಕಳು ತಮ್ಮ ಎಲ್.ಸಿ. ತೆಗೆದುಕೊಂಡು ಹೋಗುತ್ತಿರುವ ಪ್ರಕರಣಗಳು ಕಂಡುಬರುತ್ತಿಲ್ಲವಾದ್ದರಿಂದ ಎಲ್.ಸಿ. ತೆಗೆದುಕೊಂಡು ಹೋಗುತ್ತಿರುವುದನ್ನು ಸರಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆದಾಗ್ಯೂ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಧಕ್ಕೆಯಾಗದಂತೆ, ಶಿಕ್ಷಕರು ಇಲ್ಲದ ಶಾಲೆಗಳಿಗೆ ಜಿಲ್ಲೆಯಲ್ಲಿನ ಹೆಚ್ಚುವರಿ ಶಿಕ್ಷಕರನ್ನು ನಿಯೋಜಿಸಲಾಗಿದೆ.

ಇದಲ್ಲದೆ ಬಡ್ತಿ ಹಾಗೂ ನೇರ ನೇಮಕಾತಿ ಮುಖಾಂತರ ಸಹ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಆದ್ದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳು ತಮ್ಮ ಎಲ್.ಸಿ.ತೆಗೆದುಕೊಂಡು ಹೋಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (417)338.

ಸದಸ್ಯರ ಹೆಸರು : ಶ್ರೀ ಸೋಮಣ್ಣ ವಿ. (ಗೋವಿಂದರಾಜ ನಗರ)

ಉತ್ತರಿಸುವ ಸಚಿವರು : (ಶ್ರೀ ಕೆ.ಎಸ್.ಈಶ್ವರಪ್ಪ) ಇಂಧನ ಸಚಿವರು

ಅ) ರಾಜ್ಯದಲ್ಲಿ ಪ್ರತಿ ದಿನ ಉತ್ಪಾದನೆಯಾಗುವ ವಿದ್ಯುತ್ ಪ್ರಮಾಣವೆಷ್ಟು;

ಪ್ರಸ್ತುತ ರಾಜ್ಯದಲ್ಲಿ ಪ್ರತಿ ದಿನ ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನ ಪ್ರಮಾಣ 100 ದಶಲಕ್ಷ ಯೂನಿಟ್ಗಳು

ಆ) ರಾಜ್ಯದಲ್ಲಿ ಪ್ರತಿ ದಿನದ ವಿದ್ಯುತ್ ಬೇಡಿಕೆ ಎಷ್ಟು;

ಪ್ರಸ್ತುತ ರಾಜ್ಯದಲ್ಲಿ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಪ್ರತಿ ದಿನ ಸುಮಾರು 115 ರಿಂದ 120 ದಶಲಕ್ಷ ಯೂನಿಟ್ಗಳಷ್ಟಿಗೂ ವಿದ್ಯುತ್ತಿನ ಅವಶ್ಯಕತೆ ಇರುತ್ತದೆ.

ಇ) ಖಾಸಗಿ ಹಾಗೂ ಕೇಂದ್ರ ಗ್ರಿಡ್‌ನಿಂದ ಬರತಕ್ಕ ವಿದ್ಯುತ್ ಪ್ರಮಾಣವೆಷ್ಟು;

ಪ್ರಸ್ತುತ ಖಾಸಗಿ ವಲಯದಿಂದ ರಾಜ್ಯದ ವ್ಯವಸ್ಥೆಗೆ ಲಭ್ಯವಾಗುತ್ತಿರುವ ವಿದ್ಯುತ್ತಿನ ಪ್ರಮಾಣ 10 ದಶಲಕ್ಷ ಯೂನಿಟ್ಟುಗಳು ಹಾಗೂ ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಸ್ಥಾವರಗಳಿಂದ ಲಭ್ಯವಾಗುತ್ತಿರುವ ವಿದ್ಯುತ್ತಿನ ಪ್ರಮಾಣ 25 ದಶಲಕ್ಷ ಯೂನಿಟ್ಟುಗಳು

ಈ) ಪ್ರತಿ ದಿನ ಉಂಟಾಗುವ ವಿದ್ಯುತ್ ಕೊರತೆ ಎಷ್ಟು;

ರಾಜ್ಯವು ಪ್ರಸ್ತುತ ದಿನವಹಿ 15 ರಿಂದ 20 ದಶಲಕ್ಷ ಯೂನಿಟ್ಟುಗಳನಷ್ಟು ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ.

ಉ) ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ವಿದ್ಯುತ್ ಬೇಡಿಕೆ ಮತ್ತು ಲಭ್ಯತೆ ನಡುವೆ ಇರುವ ಅಂತರವನ್ನು ಸ್ವಲ್ಪಮಟ್ಟಿಗೆ ಕಡಿಮೆಗೊಳಿಸುವ ನಿಟ್ಟಿನಲ್ಲಿ ಈ ಕೆಳಕಂಡ ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಅಕ್ಟೋಬರ್ 2008 ರಿಂದ ಜನವರಿ 2009 ರವರೆಗಿನ ಅವಧಿಯಲ್ಲಿ ಕನಿಷ್ಠ 100 ಮೆ.ವ್ಯಾಟ್‌ನಿಂದ ಗರಿಷ್ಠ 700 ಮೆ.ವ್ಯಾಟ್‌ಗಳ ಮಿತಿಗೆ ಒಳಪಟ್ಟು ವಿದ್ಯುತ್ತನ್ನು ಖಚಿತ/ಒಂದು ದಿನ ಮುಂಚಿತ (ಡೇ ಅಹೆಡ್) ಆಧಾರಿತ ರೀತಿಯಲ್ಲಿ ಪಡೆಯಲು ಬಿಡ್ಡುಗಳನ್ನು ಆಹ್ವಾನಿಸಲಾಗಿರುತ್ತದೆ.
2. ದಿನ ನಿತ್ಯ ವಿದ್ಯುತ್ ಬೇಡಿಕೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸಲು "ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್" ಮೂಲಕ ವಿದ್ಯುತ್ತನ್ನು ಖರೀದಿಸಲಾಗುತ್ತಿದೆ.
3. ಲಭ್ಯತೆ ಆಧಾರಿತ ದರದ ಪ್ರಕಾರ ಅನುಕೂಲಕರ ಜಾಲ ತರಂಗವಿದ್ದಾಗ ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದ ಹೆಚ್ಚುವರಿ ವಿದ್ಯುತ್ತನ್ನು ಪಡೆಯಲಾಗುತ್ತಿದೆ.
4. ಜಲಾಶಯಗಳಲ್ಲಿ ನೀರಿನ ಪ್ರಮಾಣವನ್ನು ಹೆಚ್ಚಿಸಲು ಮೋಡ ಬಿತ್ತನೆ ಕಾರ್ಯದ ಅನುಷ್ಠಾನವನ್ನು ಶೀಘ್ರದಲ್ಲಿ ಪ್ರಾರಂಬಿಸಲು ಯೋಜಿಸಲಾಗಿದ್ದು, ಈ ಕಾರ್ಯವನ್ನು ಜಲಸಂಪನ್ಮೂಲ ಇಲಾಖೆಗೆ ವಹಿಸಲಾಗಿದೆ.
5. ಹೆಚ್ಚುವರಿ ವಿದ್ಯುತ್ತಿಗಾಗಿ ಛತ್ತೀಸ್‌ಘಡ್ ಮತ್ತು ಒರಿಸ್ಸಾ ರಾಜ್ಯಗಳೂ ಸೇರಿದಂತೆ ಇತರ ರಾಜ್ಯಗಳನ್ನು ಮತ್ತು ವಿದ್ಯುತ್ತಿನ ವಾಣಿಜ್ಯ ವಹಿವಾಟು ನಡೆಸುವ ಕಂಪನಿಗಳನ್ನು ಸಂಪರ್ಕಿಸಲಾಗಿದೆ.
6. ಛತ್ತೀಸ್‌ಘಡ್ ರಾಜ್ಯವು 100 ಮೆ.ವ್ಯಾಟ್ ವಿದ್ಯುತ್ತನ್ನು ಒದಗಿಸಲು ಸಕಾರಾತ್ಮಕವಾಗಿ ಸ್ಪಂದಿಸಿದೆ.
7. ಜಿಂದಾಲ್ ಮತ್ತು ಟಾಟಾಗಳಂತಹ ಖಾಸಗೀ ವಿದ್ಯುತ್ ಉತ್ಪಾದಕರೂ ಸಹ ವಿದ್ಯುತ್ ಒದಗಿಸಲು ಸಕಾರಾತ್ಮಕವಾಗಿ ಸ್ಪಂದಿಸಿರುತ್ತಾರೆ.

8. ಸನ್ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಘಟಕಗಳಿಂದ ಹೆಚ್ಚುವರಿ ವಿದ್ಯುತ್ತನ್ನು ಹಂಚಿಕೆ ಮಾಡುವಂತೆ ಮನವಿ ಮಾಡಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುತ್ತಾರೆ.
9. ಬಳ್ಳಾರಿಯಲ್ಲಿ 500 ಮೆ.ವ್ಯಾ.ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಘಟಕವನ್ನು ಸದ್ಯದಲ್ಲಿಯೇ ಚಾಲನೆಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.
10. ವರಾಹಿ ಜಲ ವಿದ್ಯುತ್ ಯೋಜನೆಯಲ್ಲಿ 2 * 115 ಮೆ.ವ್ಯಾ. ಸಾಮರ್ಥ್ಯದ 3 ಮತ್ತು 4 ನೇ ಘಟಕಗಳನ್ನು ಡಿಸೆಂಬರ್ 2008ರ ಅಂತ್ಯದೊಳಗೆ ಚಾಲನೆಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.
11. ಪ್ರಸಕ್ತ ವರ್ಷ ಪವನ ವಿದ್ಯುತ್ ಯೋಜನೆಗಳಿಂದ 100 ಮೆ.ವ್ಯಾ. ವಿದ್ಯುತ್ ರಾಜ್ಯಕ್ಕೆ ದೊರೆಯಲಿದೆ.

ಧೀರ್ಘಕಾಲಿಕ ಕ್ರಮಗಳು:

ಚಿ. ಎಲ್ಲಾ ವಿದ್ಯುತ್ ಕಂಪನಿಗಳ ಪರವಾಗಿ ಪವರ್ ಕಂಪನಿ ಆಫ್ ಕರ್ನಾಟಕ ಲಿ. ತಲಾ 1000 ರಿಂದ 1320 ಮೆ.ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆಗಳನ್ನು ಮೈಸೂರು ಜಿಲ್ಲೆಯ ಚಾಮಲಾಪುರದಲ್ಲಿ, ಬೆಳಗಾವಿ ಜಿಲ್ಲೆಯ ಘಟಪ್ರಭಾದಲ್ಲಿ ಹಾಗೂ ಗುಲ್ಬರ್ಗ ಜಿಲ್ಲೆಯ ಜೇವರ್ಗಿಯಲ್ಲಿ ಸ್ಥಾಪಿಸಲು ಸ್ಪರ್ಧಾತ್ಮಕ ಬಿಡ್ಡು ಪ್ರಕ್ರಿಯೆಯನ್ನು ಆರಂಭಿಸುತ್ತದೆ. ಈ ಯೋಜನೆಯನ್ನು ಖಾಸಗೀ ವಿದ್ಯುತ್ ಉತ್ಪಾದಕರಿಗೆ ಬಿಡ್ಡಿಂಗ್ ಪ್ರೊಸಸ್ ಮುಖಾಂತರ ಅವಾರ್ಡ್ ಮಾಡಲಾಗುವುದು.

ಛ. ಧೀರ್ಘಕಾಲಿಕ ಕ್ರಮವಾಗಿ 2500 ಮೆ.ವ್ಯಾಟ್ ವಿದ್ಯುತ್ತನ್ನು ಟ್ಯಾರಿಫ್ ಆಧಾರಿತ ಸ್ಪರ್ಧಾತ್ಮಕ ಬಿಡ್ಡು ಮೂಲಕ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಛಿ. ತಾಲ್ಲೂಕು ಮಟ್ಟದಲ್ಲಿ ಅಂದಾಜು ಪ್ರತಿ 5 ಮೆ.ವ್ಯಾಟ್ ಘಟಕಗಳನ್ನು ಸ್ಥಾಪಿಸಲು ಬಿಡ್ಡುಗಳನ್ನು ಆಹ್ವಾನಿಸಲಾಗಿದೆ.

ಜ. ರಾಯಚೂರು ಶಾಖೋತ್ಪನ್ನ 8ನೇ ವಿದ್ಯುತ್ ಉತ್ಪಾದನಾ ಘಟಕವು ಅಕ್ಟೋಬರ್ 2009ರ ವೇಳೆಗೆ ಕಾರ್ಯಾರಂಭಗೊಳ್ಳುವ ನಿರೀಕ್ಷೆ ಇದೆ.

ಜ. ಬಳ್ಳಾರಿಯಲ್ಲಿ 500 ಮೆ.ವ್ಯಾ. ಶಾಖೋತ್ಪನ್ನ 2ನೇ ವಿದ್ಯುತ್ ಉತ್ಪಾದನಾ ಘಟಕವು ಮಾರ್ಚ್ 2010ರ ವೇಳೆಗೆ ಕಾರ್ಯಾರಂಭಗೊಳ್ಳುವ ನಿರೀಕ್ಷೆ ಇದೆ.

ಊ) ವಿದ್ಯುತ್ ಕೊರತೆಯನ್ನು ನೀಗಿಸಲು ಸೋಲಾರ್ ಎನರ್ಜಿ ಬಳಕೆಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಸೋಲಾರ್ ಎನರ್ಜಿ ಉಪಕರಣಗಳಾದ ಮನೆ ದೀಪ, ಬೀದಿ ದೀಪ ಮತ್ತು ವಾಟರ್ ಹೀಟರ್‌ಗಳನ್ನು ಜನರು ಕಡಿಮೆ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುವಂತೆ ಜನರಲ್ಲಿ ಅವುಗಳ ಉಪಯೋಗತೆಯ ಬಗ್ಗೆ

ಅರಿವು ಮೂಡಿಸಲಾಗುತ್ತಿದೆ. ನವೀನ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ, ನವದೆಹಲಿ ಇವರು ಈ ಉಪಕರಣಗಳನ್ನು ಅಳವಡಿಸಿದಲ್ಲಿ ಸಹಾಯಧನ ನೀಡುತ್ತಾರೆ. ರಾಜ್ಯದ ವಿವಿದೆಡೆ ಈ ಉಪಕರಣಗಳನ್ನು ಪ್ರಚುರಪಡಿಸಿ ಹೆಚ್ಚು ಜನರು ಇವುಗಳ ಉಪಯೋಗವನ್ನು ಪಡೆದು ವಿದ್ಯುತ್ ಶಕ್ತಿ ಉಳಿತಾಯ ಮಾಡುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **(418)339**

ಸದಸ್ಯರ ಹೆಸರು : **ಶ್ರೀ ಸೋಮಣ್ಣ ವಿ.**
(ಗೋವಿಂದರಾಜ ನಗರ)

ಉತ್ತರಿಸುವ ಸಚಿವರು : **(ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ)**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) 2008ನೇ ಸಾಲಿನ ದ್ವಿತೀಯ ಪಿ.ಯು.ಪರೀಕ್ಷಾ ಫಲಿತಾಂಶ ಕಳೆದ 5-6 ವರ್ಷಕ್ಕಿಂತ ಕಡಿಮೆ ಪ್ರಮಾಣವಾಗಿರುವುದಕ್ಕೆ ಕಾರಣಗಳೇನು;.

2008ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಫಲಿತಾಂಶ ಕಡಿಮೆಯಾಗಿರುವುದಕ್ಕೆ ಕಾರಣಗಳು ಕೆಳಕಂಡಂತಿವೆ.

1) 2005-06 ರಲ್ಲಿ ಮೊದಲ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 60:40 ಅನುಪಾತದ (Multiple choice Question: Descriptive type of questions) ಪ್ರಶ್ನೆ ಪತ್ರಿಕೆ ಉತ್ತರಿಸಿದ ವಿದ್ಯಾರ್ಥಿಗಳು ಈ ಬಾರಿ ದ್ವಿತೀಯ ಪಿ.ಯು.ಸಿ.ಪರೀಕ್ಷೆ ಬರೆದಿರುವುದು. ಅನೇಕ ವಿದ್ಯಾರ್ಥಿಗಳು ಲಘು ಉತ್ತರ, ದೀರ್ಘ ಉತ್ತರ ಬರೆಯುವ ಅಭ್ಯಾಸವನ್ನು ಬೆಳೆಸಿಕೊಂಡಿರುವುದು. ವಿಶೇಷವಾಗಿ ಕಲಾ ವಿಭಾಗದಲ್ಲಿ ದೀರ್ಘ ಉತ್ತರ ಬರೆಯಬೇಕಾಗಿರುವುದು ಅನಿವಾರ್ಯವಾಗಿರುವುದರಿಂದ ಫಲಿತಾಂಶ ಕಡಿಮೆಯಾಗಿರುತ್ತದೆ.
2) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸುಮಾರು 3500 ಉಪನ್ಯಾಸಕರ ಹುದ್ದೆ ಖಾಲಿಯಿರುವುದು.
3) ಪ್ರಥಮ ಪಿ.ಯು.ಸಿ. ಅಧ್ಯಯನವನ್ನು ಮತ್ತು ಪರೀಕ್ಷೆಯನ್ನು ವಿದ್ಯಾರ್ಥಿಗಳು ಗಂಭೀರವಾಗಿ ಪರಿಗಣಿಸದೇ ಇರುವುದು.

ಆ) ಈ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಮೊದಲನೇ ಹಾಗೂ ಎರಡನೇ ವರ್ಷದ ಪಠ್ಯ ಕ್ರಮಗಳನ್ನು ಅಭ್ಯಸಿಸಬೇಕಾಗಿರುವುದರಿಂದ ಹೆಚ್ಚಿನ ಒತ್ತಡಕ್ಕೆ ಬಿದ್ದು ದ್ವಿತೀಯ ಪಿ.ಯು.ಫಲಿತಾಂಶ ಅದರಲ್ಲೂ ವಿಜ್ಞಾನ ವಿಭಾಗ ಕುಸಿಯುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;